the Legislative Assembly and the Legislative Council to decide whether those proposals will be implemented or not.

Diversion of surplus Waters of the Bhadra Basin to Vedavathi Basin.

*Q.—252. Sri G. T. RANGAPPA (Hosadurga).—

Will the Government be pleased to state :—

(*a*) whether there is any scheme to divert the surplus waters of the Bhadra basin to Vedavathi basin ;

(*b*) if so, the probable cost of the Scheme ;

(*c*) when do the Government propose to take up the work ?

A.—Sri S. NIJALINGAPPA (Chief Minister) —

(*a*) No.

(*b*) and (*c*) Does not arise in view of reply to clause (*a*).

ಶ್ರೀ ಜಿ. ಟಿ. ರಂಗಪ್ಪ.—ಇನ್ನು ಮುಂದೆ ಆದರೂ ಈ ವಿಷಯದಲ್ಲಿ ಸರ್ವೇ ಮಾಡುವ ವಿಚಾರ ಇದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಸರ್ವೇ ಮಾಡಬೇಕಾದ್ದಿಲ್ಲ;ಏಕೆಂದರೆ ಭದ್ರಾವ್ಯಾಲಿ ವೇದಾವತಿಗಿಂತ ಕಡಮೆ ಎತ್ತರದಲ್ಲಿದೆ. ಆದ್ದರಿಂದ ಸರ್ವೇ ಮಾಡುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಸರ್ವೇ ಮಾಡದೇ ಎತ್ತರ, ತಗ್ಗು ಇದೆಲ್ಲ ಹೇಗೆ ಗೊತ್ತಾಯಿತು ?

ಶ್ರೀ ಎಸ್. ನಿಜಲಿಂಗಪ್ಪ.—ಯಾವಯಾವ ಸ್ಥಳದಲ್ಲಿ ಹೇಗೆ ಹೇಗೆ ಇರುತ್ತದೆ ಎಂಬುದು ಸಾಧಾರಣವಾಗಿ ಗೊತ್ತಾಗುತ್ತಾದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈಗ ತಾವು ಹೇಳಿದ್ದು ಟಕ್ನಿಕಲ್ ಅಭಿಪ್ರಾಯವೇ ಅಥವಾ ತಮ್ಮ ಅಭಿಪ್ರಾಯವೇ ?

ಶ್ರೀ ಎಸ್. ನಿಜಲಿಂಗಪ್ಪ.—ಈ ಸಾಗರಕ್ಕೆ ಸಾಕಾ ದಷ್ಟು ನೀರು ಒದಗಿಸಬೇಕೆಂದು ಅನೇಕ ಉಪಾಯ ಗಳನ್ನು ಯೋಚನೆಮಾಡಿದ್ದಾರೆ. ಇದು ಸಾಧ್ಯವಾದು ದಲ್ಲ ಎಂದು ಕೈಬಿಟ್ಟಿದ್ದಾರೆ.

ಶ್ರೀ ಬಿ ಎಲ್. ಗೌಡ.—ಭದ್ರಾ ಪ್ರಾಜೆಕ್ಟ್ ಲೆವಲ್ ಏನು ? ಮಾರ್ಕಣಿವೆ ಪ್ರಾಜೆಕ್ಟ್ ಲೆವಲ್ ಏನು ?

ಶ್ರೀ ಎಸ್. ನಿಜಲಿಂಗಪ್ಪ.—ಇದರ ಎತ್ತರದಲ್ಲಿ ಒಂದಕ್ಕೊಂದಕ್ಕೆ ಸುಮಾರು 29 ಅಡಿ ವ್ಯತ್ಯಾಸವಿದೆ.

ಶ್ರೀ ಬಿ. ಎರ್. ಗೌಡ.—ಭದ್ರಾ ಪ್ರಾಜೆಕ್ಟ್‌ನ ಹಿಂದು ಗಡೆಯಿಂದ ಅಳತೆ ಮಾಡಿದರೆ ಮಾರ್ಕಣಿವೆ ಎತ್ತರ ದಲ್ಲಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—29 ಅಡಿ ಇದೆ. 20 ಮೈಲಿ ಬರಬೇಕು, ಅದು ಸಾಧ್ಯವಾಗದ ಮಾತು.

Sri C. J. MUCKANNAPPA.—Will not the diversion of the surplus waters of the Bhadra Basin to theVedavathi Basin go a very long way in relieving the drought in Hiriyur Taluk ?

ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಮಾನ್ಯ ಸದಸ್ಯರು ನಾನು ಹೇಳಿದಉತ್ತರವನ್ನು ಗಮನಿಸಲಿಲ್ಲ ಎಂದು ಕಾಣುತ್ತದೆ. ಒಂದು ಎತ್ತರದಲ್ಲದೆ ಒಂದು ತಗ್ಗಿನಲ್ಲದೆ, ತಗ್ಗಿನ ಪ್ರದೇಶದಿಂದ ಎತ್ತರದ ಪ್ರದೇಶಕ್ಕೆ ನೀರು ತರುವುದು ಕಷ್ಟಕರವಾದ ಪ್ರಶ್ನೆ.

ಶ್ರೀ ವಿ. ಮಸಿಯಪ್ಪ.—ಭದ್ರಾ ಕಣಿವೆಯಿಂದ ವೇದಾವತೀ ಕಣಿವೆಗೆ ನೀರು ತರಲು ಬೇರೆ ಇನ್ನಾವು ದಾದರೂ ಏಧವಾದ ಯೋಜನೆ ಇದ್ದರೆ ಅದನ್ನು ಪರಿಶೀಲನೆ ಮಾಡುತ್ತೀರಾ ? I have got a proposal with me, Mr. Speaker.

Mr. SPEAKER.—Proposals cannot be made during the question hour. The Hon'ble Member may kindly go and meet the concerned authorities in their chamber or wherever they are in connection with that.

Sri V. MASIYAPPA.—May I know whether they will be considered ?

Sri S. NIJALINGAPPA.— If there are other porposals we will seriously consider them.

Steps taken to reduce the Submersion Area under Marikanive Reservoir.

*Q.—253. Sri G. T. RANGAPPA (Hosadurga).—

Will the Government be pleased to state;—

(*a*) the total submersion area of Marikanive Reservoir ;

(*b*) the atchkat of the above Reservoir ;

(*c*) the steps they propose to take to reduce the area under submersion ;

A.—Sri S. NIJALINGAPPA (Chief Minister).—

(*a*) 21,645 acres.

(*b*) 25,000 acres.

(*c*) Nil.

ಶ್ರೀ ಜಿ. ಟಿ. ರಂಗಪ್ಪ.—25,000 ಎಕರೆ ಅಚ್ಚು ಕಟ್ಟು ಎಂದು ಹೇಳಿದ್ದೀರಿ.ಅದು ಅಕ್ಯೆವರ್ ಆಗಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಆ ಅಚ್ಚುಕಟ್ಟಿನ ಪ್ರದೇಶದಲ್ಲಿ ರೈತರು ಸಾಗುಮಾಡುತ್ತಾರೆ. ಅದನ್ನು ಅಕ್ಯೆವರ್ ಮಾಡಬೇಕಾದ್ದಿಲ್ಲ.

ಶ್ರೀ ಜಿ. ಟಿ. ರಂಗಪ್ಪ.—ಹಿಡುವಳಿದಾರರ ಜಮೀನಿ ನಲ್ಲಿ ನೀರು ಮುಳುಗಡೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಹಿಡ ವಳಿದಾರರೂ ಯಾರು ಇಲ್ಲವೇ ಇಲ್ಲ. ನೀರು ಬಂದಂತೆಲ್ಲಾ ಆ ಅಚ್ಚು ಕಟ್ಟನಲ್ಲರುವವರಿಗೆ ಅನುಕೂಲವಾಗುತ್ತದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸಬ್‌ಮರ್ಜ್ ಆದ ಪ್ರದೇಶದ ಹಿಡುವಳಿದಾರರಿಗೆ ಕಾಂಪೆಕ್ಸೇಷನ್ ಕೊಟ್ಟಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಈ ಕೆರೆ ಕಟ್ಟಿ 60 ವರ್ಷ ಆಯಿತು; ಆದ್ದರಿಂದ ಈಗ ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಭೂಮಿ ನೀರಿನಿಂದ ಮುಳುಗಿ ಬೆಳೆಗೆ ನಷ್ಟವಾಗುತ್ತಿದೆ ಎಂದು ರೈತರು ಅರ್ಜಿಕೊಟ್ಟಿದ್ದಾರೆ. ಇದುವರೆಗೂ ಪರಿಹಾರ ಕೊಟ್ಟಿಲ್ಲ. ಅದಕ್ಕೆ ಈ ಪ್ರಶ್ನೆಯನ್ನು ಹಾಕಿರುವುದು.

Mr. SPEAKER.—Compensation is not for acquisition but for damage to the crops.

ಶ್ರೀ ಎಸ್. ನಿಜಲಿಂಗಪ್ಪ.—Regarding damages to crops ಕೆಲವು ಸಂದರ್ಭಗಳಲ್ಲಿ ನೀರು ಕಡಮೆ ಇದ್ದಾಗ ಮುಫತ್ತಾಗಿ ಕೊಡುತ್ತಾರೆ. ಮುಳುಗಿ ಹೋದರೆ ಅವರೇ risk ತೆಗೆದುಕೊಳ್ಳುತ್ತಾರೆ. ಆದ್ದರಿಂದ ಕಾಂಪೆನ್ಸೇಷನ್ ಪ್ರಶ್ನೆಯೇ ಬರುವುದಿಲ್ಲ. ನಬ್‌ಮರ್ಷ್ ವಿಷಯ 60 ವರ್ಷದ ಮಾತು; ಇವೊತ್ತು ಕೇಳುತ್ತಾ ಇದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಕೆರೆ ಅಂಗಳದ ಅಚ್ಚು ಕಟ್ಟು ಪ್ರದೇಶದಲ್ಲಿ ನೀರು ಮುಳುಗಡೆ ಆದರೂ ಕೂಡ ಸಾಗುಮಾಡಿದ ಬೆಳೆಗೆ ಕಾಂಪೆನ್ಸೇಷನ್ ಸಿಕ್ಕಿಲ್ಲ. ವರ್ಷೇವರ್ಷೇ ಮುಳುಗಡೆಯಾಗುತ್ತಇದೆ. ಆದ್ದರಿಂದ ಕಾಂಪೆನ್ಸೇಷನ್ ಕೊಡಬೇಕೆನ್ನುತ್ತಾರೆ. ಜಮೀನು ಎಲ್ಲಾ ಅವರವರ ಹೆಸರಿನಲ್ಲೆ ಇದೆ.

ಶ್ರೀ ಎಸ್. ನಿಜಲಿಂಗಪ್ಪ.—ಸದಸ್ಯರು ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ಅದಕ್ಕೆ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

Sri S. M. KRISHNA.—Supplementary to (*a*): Has any compensation been awarded to the ryots?

Mr. SPEAKER.—It was answered.

ಶ್ರೀ ಕೆ. ಲಕ್ಕಪ್ಪ.—ಈಗ ಮುಳುಗಡೆಯಾಗಿರತಕ್ಕ ಅಚ್ಚುಕಟ್ಟು ಪ್ರದೇಶದಲ್ಲಿ ನೀರು ಜಾಸ್ತಿ ಬಂದಿರುವುದರಿಂದ ರೈತರಿಗೆ ಪರಿಹಾರ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ನೀರು ಜಾಸ್ತಿ ಬಂದಾಗ ಬಂದರೆ ಸಾಕು ಎಂದು ಕಾಯುತ್ತ ಇರುತ್ತಾರೆ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಮಾರೀ ಕಣಿವೆ ಜಲಾಶಯದಿಂದ 21,645 ಎಕರೆ ಪ್ರದೇಶ ಮುಳುಗಡೆಯಾಗಿದೆ ಎಂದು ಹೇಳಿದ್ದೀರಿ. ಅಚ್ಚುಕಟ್ಟು ಪ್ರದೇಶ 25,000 ಎಕರೆ ಎಂದು ಹೇಳಿದ್ದೀರಿ. ಇದರಿಂದ ಆಗಿರುವ ಕಷ್ಟವೇನು?

(*No answer*)

Sri C. J. MUCKANNAPPA.—What is the capacity of this reservoir?

Sri S. NIJALINGAPPA.—25.3 T.M. Cft.

Sri C. J. MUCKANNAPPA.—Has Government at any time increased the capacity of this reservoir?

Sri S. NIJALINGAPPA.—Not after it was constructed.

Sri H. R. KESHAVA MURTHY.—Is it possible to increase its capacity?

Sri S. NIJALINGAPPA.—It has been constructed so as to hold more water than the catchment area can give. Therefore, there is no question of increasing it.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಭೂಮಿ ಕಳೆದುಕೊಂಡಿರತಕ್ಕವರಿಗೆ ಮಾನ್ಯ ಮುಖ್ಯಮಂತ್ರಿಗಳು ಈಗ ಲಾದರೂ ಕಾಂಪೆನ್ಸೇಷನ್ ಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತಾರೆಯೇ?

Mr. SPEAKER.—I disallow that question. The question of compensation does not arise.

ಶ್ರೀ ವಿ. ಮಸಿಯಪ್ಪ.—ನನ್ನ ಹತ್ತಿರ ಇರುವ ಯೋಜನೆಯನ್ನು ಕಾರ್ಯರೂಪಕ್ಕೆ ತಂದರೆ ಪ್ರತಿ ವರ್ಷ ಒಂದು ಲಕ್ಷ ಇಪ್ಪತ್ತೈದು ಸಾವಿರ ಎಕರೆಗಿಂತ ಹೆಚ್ಚು ನೀರು ಕೊಡಬಹುದು ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲ.

Sri ANNA RAO GANAMUKHI.—What is the capital invested on this and what is the return Government is getting?

Sri S. NIJALINGAPPA.—It does not arise out of this question, nor have I got the information.

1-30 P.M.

Construction Work of Chickhole Dam.

**Q.*—256. Sri M. C. BASAPPA (Chamarajanagar).—

Will the Government be pleased to state:—

(*a*) the date on which the construction work of Chickhole Dam was started;

(*b*) the time stipulated to complete the work under the contract:

(*c*) whether it will be completed within the stipulated time under the contract;

(*d*) the progress achieved so far (as per the expenditure statement)?

A.—Sri S. NIJALINGAPPA (Chief Minister).—

(*a*) October 1960.

(*b*) By 15-9-1962.

(*c*) No.

(*d*) Rs. 17.53 lakhs up to end of March 1962.

Sri M. C. BASAPPA.—Has it come to the notice of Government that even the foundation work is not complete?